# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: **429**
ಸದಸ್ಯರ ಹೆಸರು: **ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು)**
ಉತ್ತರಿಸುವ ದಿನಾಂಕ: **13.08.2025**
ಉತ್ತರಿಸುವ ಸಚಿವರು: **ಲೋಕೋಪಯೋಗಿ ಸಚಿವರು**

| ಕ್ರ ಸಂ | ಪ್ರಶ್ನೆ | ಉತ್ತರಗಳು |
|---|---|---|
| ಅ) | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ಖಾನಾಪೂರದಿಂದ ಹಲಸಿ ಮಾರ್ಗವಾಗಿ ದಾಂಡೇಲಿಗೆ ಹೋಗುವ ಜಿಲ್ಲಾ ಮುಖ್ಯ ರಸ್ತೆಯು ತಾವರಗಟ್ಟಿ ಚೆಕ್ ಪೋಸ್ಟ್‌ನಿಂದ ಹುಂಬ್ರಾಪಾನಿ ಗ್ರಾಮದವರೆಗಿನ ಕೇವಲ 2.5 ಕಿ.ಮೀ ರಸ್ತೆಯು ಸಂಪೂರ್ಣವಾಗಿ ಹದಗೆಟ್ಟಿದ್ದು, ಮಾರ್ಚ್ 2025 ರಲ್ಲಿ 400 ಮೀಟರ್ ಕಾಮಗಾರಿ ಹೊಸದಾಗಿ ಮಾಡಿದ ರಸ್ತೆ ಕೂಡ ಸಂಪೂರ್ಣವಾಗಿ ಹಾಳಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; ಈ ಕಾಮಗಾರಿಗೆ ಬಿಡುಗಡೆಯಾದ ಅನುದಾನವೆಷ್ಟು; | ಬೆಳಗಾವಿ ಜಿಲ್ಲೆ ಖಾನಾಪೂರ ತಾಲ್ಲೂಕಿನ ತಾವರಗಟ್ಟಿ ಪಾಟೋಳಿ ಜಿಲ್ಲಾ ಮುಖ್ಯ ರಸ್ತೆ ಕಿ.ಮೀ. 0.00 ರಿಂದ 6.80ರ ವರೆಗೆ ಒಟ್ಟು 6.80 ಕಿ.ಮೀ. ಉದ್ದವಿರುತ್ತದೆ.<br>ಸದರಿ ರಸ್ತೆಯ ತಾವರಗಟ್ಟಿ ಚೆಕ್ ಪೋಸ್ಟ್ ನಿಂದ ಹುಂಬ್ರಾಪಾನಿ ಗ್ರಾಮದವರೆಗೆ ಒಟ್ಟು 2.50 ಕಿ.ಮೀ ಉದ್ದ ರಸ್ತೆಯನ್ನು ಕಳೆದ 10 ವರ್ಷಗಳಿಂದ ವಾರ್ಷಿಕ ನಿರ್ವಹಣೆ ಬಿಟ್ಟು ಯಾವುದೇ ಸುಧಾರಣೆ ಕಾಮಗಾರಿಯನ್ನು ಕೈಗೊಂಡಿರುವುದಿಲ್ಲ. ಕಳೆದ 03 ವರ್ಷಗಳಲ್ಲಿ ಸುರಿದ ಅತಿಯಾದ ಮಳೆಯಿಂದಾಗಿ ಸದರಿ ಜಿಲ್ಲಾ ಮುಖ್ಯ ರಸ್ತೆಯ ಆಯ್ದ ಭಾಗಗಳಲ್ಲಿ ತಗ್ಗು ಗುಂಡಿಗಳು ಬಿದ್ದು ಹಾಳಾಗಿರುತ್ತವೆ.<br>ಹಾನಿಯಾದ ರಸ್ತೆಯನ್ನು ಅಭಿವೃದ್ಧಿಪಡಿಸಲು ಪ್ರಸಕ್ತ ಸಾಲಿನಲ್ಲಿ 3054–ಜಿಲ್ಲಾ ಮುಖ್ಯ ರಸ್ತೆ ನಿರ್ವಹಣೆ ಅಡಿ ರೂ.20.00 ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಸದರಿ ಮೊತ್ತದಲ್ಲಿ ಅತಿ ಜರೂರಾಗಿ ಅಭಿವೃದ್ಧಿಪಡಿಸಬೇಕಾದ ರಸ್ತೆ ಕಿ.ಮೀ 0.500 ರಿಂದ 1.178 ವರೆಗಿನ ರಸ್ತೆಯನ್ನು ತಾತ್ಕಾಲಿಕ ದುರಸ್ತಿ ಕೈಗೊಂಡು ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.<br>ಈ ಸಾಲಿನಲ್ಲಿ ವಾಡಿಕೆಗಿಂತ ಮುಂಚೆಯೇ ಮುಂಗಾರು ಮಳೆ ಪ್ರಾರಂಭವಾಗಿ ಅತೀಯಾದ ಮಳೆಯಾಗಿದ್ದರಿಂದ ಹಾಗೂ ಅತಿ ಭಾರವಾದ ವಾಹನಗಳ ಸಂಚಾರದಿಂದ ಕಿ.ಮೀ 0.50 ರಿಂದ 1.1 ರಲ್ಲಿ ಅಲ್ಲಲ್ಲಿ ರಸ್ತೆ, ಹಾನಿಗೊಳಗಾಗಿದ್ದನ್ನು ಗಮನಿಸಲಾಗಿದೆ.<br>ಸದರಿ ರಸ್ತೆಯನ್ನು ಪುನರ್ ನಿರ್ಮಾಣಕ್ಕಾಗಿ ರೂ.275.00 ಲಕ್ಷಗಳ ಅನುದಾನದ ಅವಶ್ಯಕತೆ ಇದ್ದು, ಅನುದಾನದ ಲಭ್ಯತೆಯನುಸಾರ ದುರಸ್ತಿ ಕಾಮಗಾರಿಯನ್ನು ಕೈಗೊಳ್ಳಲಾಗುತ್ತದೆ. |
| ಆ) | ಸದರಿ ಜಿಲ್ಲಾ ಮುಖ್ಯ ರಸ್ತೆಯ ಕೇವಲ 2.5 ಕಿ.ಮೀ. ರಸ್ತೆಯನ್ನು ಆದ್ಯತೆಯ ಮೇರೆಗೆ ಕೈಗೊಳ್ಳಲು ಸರ್ಕಾರ ಅನುದಾನ ಒದಗಿಸುವುದೇ; ಈ ರಸ್ತೆಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು (ವಿವರ ನೀಡುವುದು)? | |

ಲೋಇ 101 ಸಿಕ್ಯೂಎನ್ 2025(ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು